**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 27.06.2021.

**1] ಎಪಿಎಮ್‌ಸಿ ಪೊಲೀಸ ಠಾಣೆ ಗುನ್ನೆ ನಂ: 60/2021 ಕಲಂ: 304(ಎ) ಐಪಿಸಿ**

ದಿನಾಂಕ 26.06.2021 ರಂದು 15.00 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಟಾಟಾ ಹೈವಾ ಟಿಪ್ಪರ ವಾಹನ ನಂ: ಕೆಎ:28 ಸಿ:5582 ನೇದ್ದರ ಚಾಲಕ ಪಿರ್ಯಾದಿಯ ಗಂಡ ಮೃತ ಅಬ್ದುಲರೆಹಮಾನ ತಂದೆ ಗೂಡುಸಾಬ ಭಾಗೇವಾಡಿ, ವಯಾ 32 ವರ್ಷ, ಉದ್ಯೋಗ ಮೆಕ್ಯಾನಿಕ, ಸಾ॥ ಶಾಪೇಟಿ ರಂಗೀನ ಮಸಿದಿ ಹತ್ತಿರ ವಿಜಯಪುರ ಶಹರದ ಆದಿಲಶಾಹಿ ನಗರದಲ್ಲಿರುವ ಮೈಬೂಬ ತಂದೆ ಮೊಹ್ಮದಹುಸ್ಮಾನ ಕಲಾದಗಿ ಮೇಸ್ತ್ರಿಯ ಎಚ್.ಕೆ.ಜಿ.ಎನ್ ಗ್ಯಾರೇಜ ಮುಂದೆ ಟಾಟಾ ಹೈವಾ ಟಿಪ್ಪರ ವಾಹನ ನಂ: ಕೆಎ:28 ಸಿ:5582 ನೇದ್ದರ ಬ್ರೇಕ್ ಸೆಟ್ಟಿಂಗ್ ಮಾಡುವ ಸಲುವಾಗಿ ವಾಹನದ ಕೆಳಗಡೆ ಹೋದಾಗ ಸದರ ವಾಹನದ ಚಾಲಕನು ಏರ್ ತುಂಬುವ ಸಲುವಾಗಿ ವಾಹನ ಚಾಲು ಮಾಡಿ ನಿರ್ಲಕ್ಷ್ಯತನದಿಂದ ವಾಹನ ಚಾಲನೆ ಮಾಡಿ ಮುಂದೆ ಬಿಟ್ಟು ಸದರಿಯವನ ಮುಖ ಹಾಗೂ ತಲೆಯ ಮೇಲೆ ಹಾಯಿಸಿ ಮಧ್ಯಾಹ್ನ 03:00 ಗಂಟೆ ಸುಮಾರಿಗೆ ಮರಣಪಡಿಸಿದ್ದು, ಸದರಿಯವನ ಸಾವಿಗೆ ಸದರ ವಾಹನದ ಚಾಲಕನೇ ಕಾರಣ ಇರುತ್ತಾನೆ, ಸದರಿಯವನ ಮೇಲೆ ಸೂಕ್ತ ಕಾನೂನು ಕ್ರಮ ಕೈಕೊಳ್ಳಲು ವಿನಂತಿ ಅದೆ ಅಂತಾ ವಗೈರೆ ಪಿರ್ಯಾದಿಯಲ್ಲಿ ನಮೂದ ಅದೆ. ಈ ಬಗ್ಗೆ ಕೌಸರ ಗಂಡ ಅಬ್ದುಲರೆಹಮಾನ ಭಾಗೇವಾಡಿ, ವಯಾ 28 ವರ್ಷ, ಜಾತಿ ಮುಸ್ಲಿಂ, ಉದ್ಯೋಗ ಮನೆಗೆಲಸ, ಸಾ॥ ಶಾಪೇಟಿ ರಂಗೀನಮಸಿದಿ ಹತ್ತಿರ ವಿಜಯಪುರ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 26.06.2021 ರಂದು ಎಪಿಎಮ್‌ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಹೊರ್ತಿ ಪೊಲೀಸ ಠಾಣೆ ಗುನ್ನಾ. ನಂ: 79/2021 ಕಲಂ: 87 ಕೆಪಿ ಆ್ಯಕ್ಟ & 269, 270 ಐಪಿಸಿ & ಕರ್ನಾಟಕ ಸಾಂಕ್ರಾಮಿಕ ರೋಗಗಳ ಅಧಿನಿಯಮ 2020 ಕಲಂ: 5 (3).**

ದಿನಾಂಕ 26.06.2021 ರಂದು 19:10 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ಪಿಂಟು ಭೀಮು ಪವಾರ 2) ಲಕ್ಷ್ಮಣ ಸೋಮಲು ಪವಾರ 3) ಹೀರು ಖೇಮು ರಾಠೋಡ 4) ಆನಂದ ನಂದು ರಾಠೋಡ 5) ಪರಮಾನಂದ ಉಮಾಜಿ ಪವಾರ 6) ಸುನೀಲ ಮಾದೇವ ರಾಠೋಡ 7) ರಮೇಶ ಬೋಜು ರಾಠೋಡ ಸಾ॥ ಎಲ್ಲರೂ ರಾಜನಾಳ ತಾಂಡಾ ತಾ॥ ಇಂಡಿ ಇವರು ರಾಜನಾಳ ತಾಂಡಾ ಗುರುಗೋವಿಂದ ದೇವರ ಗುಡಿಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಗುಡಿಯ ಲೈಟ ಬೆಳಕಿನಲ್ಲಿ ಅಂದರ್ ಬಾಹರ್ ಎಂಬುವ ಮನ್ನಾ ಇಸ್ಪೇಟ್ ಜೂಜಾಟದಲ್ಲಿ ತೊಡಗಿದ್ದು, ಸದರಿಯವರ ಕಡೆಯಿಂದ ಇಸ್ಪೀಟ್ ಜೂಜಾಟಕ್ಕೆ ಸಂಬಂಧಿಸಿದ ರೋಖ ಹಣ: 10,340/– ರೂ ಹಾಗೂ 52 ಇಸ್ಪೀಟ ಎಲೆಗಳನ್ನು ವಶಕ್ಕೆ ಪಡೆದುಕೊಂಡು ಕರ್ನಾಟಕ ರಾಜ್ಯ ಸರ್ಕಾರ ಕೋವಿಡ್ 19 ಸಾಂಕ್ರಾಮಿಕ ಮಾರಣಾಂತಿಕ ರೋಗ ಹರಡದಂತೆ ಲಾಕ್ ಡೌನ್ ಮಾಡಿದ್ದು ಸದರಿಯವರು ಕೋವಿಡ್ 19 ಸಾಂಕ್ರಾಮಿಕ ರೋಗ ತಡೆ ಕಾಯ್ದೆ ಉಲ್ಲಂಘನೆ ಮಾಡಿ ಮಾಸ್ಕ ಧರಿಸದೆ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳದೆ ಲೈಟ ಬೆಳಕಿನಲ್ಲಿ ಸಾರ್ವಜನಿಕ ಸ್ಥಳದಲ್ಲಿ ಇಸ್ಪೀಟ್ ಜೂಜಾಟ ಆಡುತ್ತಿದ್ದಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಎಸ್ ಆರ್ ನಾಯ್ಕೋಡಿ ಹೆಚ್ಚುವರಿ ಪಿ.ಎಸ್.ಐ ಹೊರ್ತಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 26.06,2021 ರಂದು ಹೊರ್ತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 110/2021 ಕಲಂ: 269, 188 ಐಪಿಸಿ ಮತ್ತು 87 ಕೆ.ಪಿ ಆಕ್ಟ**

ದಿನಾಂಕ 26.06.2021 ರಂದು 1730 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ಪರಸುರಾಮ ಈಶ್ವರ ಕಟ್ಟಿ ಸಾ॥ ಕಲ್ಲಕಾರಜೋಳ 2] ರಾಮಣ್ಣ ಜಗದೇವಪ್ಪ ಬಳಗಾರ ಸಾ: ಹಿರೇರೂಗಿ 3] ಮಂಗಲದಾಸ ಲಕ್ಷ್ಮಣ ಭಜಂತ್ರಿ ಸಾ: ಕಲ್ಲಪ್ಪವಾಡಿ 4] ರಾಜಕುಮಾರ ಈರಪ್ಪ ಗಾಯಕವಾಡ ಸಾ: ಬರಗುಡಿ 5] ಸದಾಶಿವ ಮಹಾದೇವಪ್ಪ ಅಚ್ಚೇಗಾಂವ ಸಾ: ಲಚ್ಯಾಣ 6] ಸುಭಾಸ ಅಣ್ಣಪ್ಪ ಕ್ಷತ್ರಿ ಸಾ:ಬರಗುಡಿ ಇವೆಲ್ಲರೂ ಕೂಡಿಕೊಂಡು ವ್ಯಾಪಕವಾಗಿ ಹರಡುತ್ತಿರುವ ಕರೋನ ವೈರಸ್ [ಕೋವಿಡ್–19] ಸೋಂಕು ತಡೆಗಟ್ಟುವ ಕುರಿತು ವಿಕೆಂಡ್ ಲಾಕ್‌ಡೌನ್ ಜಾರಿಯಲ್ಲಿದ್ದು ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪುರ ಜಿಲ್ಲೆಯಾದ್ಯಾಂತ ಕಲಂ:144 ಸಿಆರಪಿಸಿ ಜಾರಿ ಮಾಡಿದ್ದರು ಸಹ *ಪ್ರಾಣಕ್ಕೆ ಅಪಾಯಕಾರಿಯಾಗುವ ರೋಗದ ಸೋಂಕುವನ್ನು ಹರಡುವ ಸಂಭವಿರುವ ಇರುತ್ತದೆ ಅಂತಾ ಗೊತ್ತಿದ್ದರು ಸಹ ನಿರ್ಲಕ್ಷ್ಯತನ ಮಾಡಿ ಬರಗುಡಿ ಗ್ರಾಮದ ಕನ್ನಡ ಶಾಲೆಯ ಹತ್ತಿರ* ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ತಮ್ಮ ಫಾಯಿದೆಗೋಸ್ಕರ ಇಸ್ಪೇಟ ಎಲೆಗಳ ಸಹಾಯದಿಂದ ಪಣಕ್ಕೆ ಹಣ ಹಚ್ಚಿ ಅಂದರ ಬಾಹರ ಅಂಬುವ ಮನ್ನಾ ಜೂಜಾಟವನ್ನು ಆಡುತ್ತಿರುವಾಗ 3400 ರೂಗಳು ಮತ್ತು 52 ಇಸ್ಪೇಟ್ ಎಲೆಗಳ ಸಮೇತ ಸಿಕ್ಕಿದ್ದು ಇರುತ್ತದೆ. ಜಪ್ತದ ಮುದ್ದೇ ಮಾಲು: 1] ರೋಖ ಹಣ 3400 ರೂಗಳು 2] ಮತ್ತು 52 ಇಸ್ಪೇಟ್ ಎಲೆಗಳ ಅಕಿ: 00.00 ರೂಗಳು ಈ ಬಗ್ಗೆ ಸ:ತ: ಮಾಳಪ್ಪ ಪೂಜಾರಿ ಪಿಎಸ್‌ಐ ಇಂಡಿ ಗ್ರಾಮೀಣ ಪೊಲೀಸ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 26.06,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.